ಶ್ರೀ ಕೆ. ಸಿದ್ದಯ್ಯ : ಇದರಲ್ಲಿ ಎಷ್ಟೋ ಮಾರ್ಕ್ಸ್ ತೆಗೆಯಬೇಕಾಗಿದ್ದರೆ, ಇದರಿಂದ ಅನುಕೂಲವಾಗುತ್ತದೆ ಎಂದು ತಿಳಿದುಕೊಂಡ ಮೇಲೆ ಜನಗಳು ಇದಲ್ಲಿ ಏನು ಮಾಡುತ್ತಾರೆ ಎಂದರೆ ಅನೇಕ ಅವ್ಯವಹಾರ, ಭ್ರಷ್ಟಾಚಾರ, ಫೇವರಿಟಿಸಂ ಇದೆಲ್ಲ ಮಾಡಿ ಮಾರ್ಕ್ಸ್ ತೆಗೆಯಲು ಹೋಗುತ್ತಾರೆ. ಜೊತೆಗೆ ಕೆಲವು ಒಳ್ಳೆಯ ಸ್ಥಿತಿಗತಿಯಲ್ಲಿರ ತಕ್ಕ ಜನ ಹೆಚ್ಚಿಗೆ ಮಾರ್ಕ್ಸ್ ಏಷ್ಟೇಷ್ಟು ಬೇಕೋ ಆ ಪ್ರಯತ್ನಗಳನ್ನೆಲ್ಲ ಅವ್ಯವಹಾರದ ರೀತಿಯಲ್ಲಿ ನಡೆಸುತ್ತಾರೆ. ಇದರಿಂದ ಭ್ರಷ್ಟಾಚಾರ ಆಗುತ್ತದೆ. ಬಡವರಿಗೆ ಮತ್ತು ಇಗ್ನೊರೆಂಟ್ ಪೀಪಲ್‌ಗೆ ಇದರಿಂದ ಹಾನಿಯಾಗುತ್ತದೆ.

ಇದನ್ನು ಕೂಲಂಕಷವಾಗಿ ಎಕ್ಸಾಮಿನ್ ಮಾಡಬೇಕಾದರೆ ಸರ್ಕಾರ ಒಂದು ಕಮಿಟಿಯನ್ನು ರಚನೆ ಮಾಡುತ್ತದೆಯೇ ಆಪಾರವಾಗಿ ಭ್ರಷ್ಟಾಚಾರವಾಗುತ್ತಿದೆ. ಇದರಿಂದ ಸರ್ಕಾರಿ ನೌಕರರಿಗೆ ಮತ್ತು ಬಡವರಿಗೆ ದೊಡ್ಡ ಫ್ರಾಡ್ ಆಗಿದೆ.

ಶ್ರೀ ಕೆ.ಹೆಚ್. ರಂಗನಾಥ್ : ಭ್ರಷ್ಟಾಚಾರ ವೈಗೆರೆ ಆಗುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

Construction of new KSRTC depot at Nipani.

548 - SRI. SUBHASH JOSHI (NIPANI) : will the Hon'ble Minister for Transport be pleased to state:

a) Whether the construction of new KSRTC Depot has been started at Nippani?

b) The total cost of the construction of New Depot at Nippani?

SRI. BHEEMANA KHANDRE (Minister for Transport) :

a) YES.

b) Rs. 50.00 Lakhs.

SRI SUBHASH JOSHI : This year what is the budget for custructur of new unit at nippam if and if the work is started, when it will be completed? Alongwith the depot, whether construction of new bus stand will be started?

SRI BHIMANNA KHANDRE: The question is whether the construction of new KSRTC depot has been started at Nippani. The answer is, it is started. The total cost of the construction of new depot is Rs.50 lakhs. Regarding details, the work is expected to be completed within 18 months.

ರಾಜ್ಯದಲ್ಲಿ ಆಹಾರ ಪದಾರ್ಥಗಳ ವಿತರಣೆಯಲ್ಲಿ ಕಾಳಸಂತೆ.

617 - ಶ್ರೀ ಆಂಜನಮೂರ್ತಿ (ನೆಲಮಂಗಲ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದ ಅನೇಕ ಕಡೆಗಳಲ್ಲಿ ಆಹಾರ ವಿತರಣೆ ಮಾಡಲು ಪರವಾನಗೆ ಪಡೆದಿರುವ ಕೆಲವು ವ್ಯಕ್ತಿಗಳು ಹಾಗೂ ಕೆಲವು ಸಹಕಾರ ಸಂಘಗಳು

ಆಹಾರ ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ, ಅಂತಹ ವ್ಯಕ್ತಿಗಳ ಹಾಗೂ ಸಹಕಾರ ಸಂಘಗಳ ಮೇಲೆ ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಹೌದು.

ಆ) ಕಾಳಸಂತೆ ಮಾರಾಟ ಪ್ರಕರಣದಲ್ಲಿ ಬಾಗಿಯಾಗಿರುವ ವ್ಯಕ್ತಿಗಳ ಹಾಗೂ ಸಹಕಾರ ಸಂಘಗಳ ಮೇಲೆ ಕ್ರಮ ಕೈಗೊಂಡು ಜನವರಿ 1992ರಿಂದ ಇಲ್ಲಿಯವರೆಗೆ 217 ಲೈಸನ್ಸ್‌ಗಳನ್ನು ರದ್ದುಗೊಳಿಸಿದ್ದು, 211 ಲೈಸೆನ್ಸ್‌ಗಳನ್ನು ಅಮಾನತ್ತಿನಲ್ಲಿಡಲಾಗಿದೆ.

ಶ್ರೀ ಅಂಜನಮೂರ್ತಿ : ನನ್ನ ಪ್ರಶ್ನೆಗೆ ಉತ್ತರವಾಗಿ 217 ಜನರ ಲೈಸನ್ಸ್‌ಗಳನ್ನು ವಜಾ ಮಾಡಿದ್ದೇವೆಂದು ಹೇಳಿದ್ದಾರೆ. ಈ ಇಲಾಖೆವತಿಯಿಂದ ಎನು ಆಹಾರ ವಿತರಣೆ ಮಾಡುತ್ತಾರೆ ಅದರಲ್ಲಿ ವಿಶೇಷವಾಗಿ ಎಣ್ಣೆ ಅಕ್ಕಿ, ಗೋಧಿ, ಇವು ಎಷ್ಟು ದುರ್ನಾತದಿಂದ ಕೂಡಿವೆ ಅಷ್ಟೇ ಈ ಇಲಾಖೆ ಕೂಡ ದುರ್ನಾಥದಿಂದ ಕೂಡಿದೆ ಇದು ಸತ್ಯ ಮತ್ತು ಎಲ್ಲಾರಿಗೂ ಗೊತ್ತಿರುವ ವಿಷಯ. ಈ ಇಲಾಖೆಯಿಂದ ಲೈಸನ್ಸ್ ಪಡೆದವರು ವಿತರಣೆ ಜಾಗದಲ್ಲೇ ಆಹಾರ ಪದಾರ್ಥಗಳನ್ನು ಬೇರೆಯವರಿಗೆ ಮಾರಾಟ ಮಾಡುತ್ತಿರುವುದದು ಸರ್ಕಾರದ ಗಮನಕ್ಕೆ ಬಂದಿಲ್ಲವೇ? ಇದನ್ನು ನಿಂಯತ್ರಣ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀಮತಿ ಮನೋರಮ ಮಧ್ವರಾಜ್ : ಕಂಟ್ರೋಲ್ ಆರ್ಟಿಕಲ್ಸ್‌ನ್ನು ತೆಗೆದುಕೊಂಡು ಜಾಗದಲ್ಲೇ ಮಾರುವಂಥ ನಿದರ್ಶನ ಇದ್ದರೆ, ಅದನ್ನು ನಮ್ಮ ಗಮನಕ್ಕೆ ತಂದರೆ ಖಂಡಿತ ಸರ್ಕಾರ ಕ್ರಮ ಕೈಗೊಳ್ಳುತ್ತದೆ.

ಶ್ರೀ ಅಂಜನಮೂರ್ತಿ : ಆಹಾರ ವಿತರಣಾ ಕಾರ್ಯಕ್ಕೆ ಎಷ್ಟು ಸೊಸೈಟಿಗಳು ಸೇರಿವೆ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಆಹಾರ ವಿತರಣೆ ಮಾಡುವುದಕ್ಕೆ ಎಷ್ಟು ಜನರಿದ್ದಾರೆ? ಕೆಲವು ವಿತರಕರು ಗ್ರಾಮಾಂತರ ಪ್ರದೇಶಗಳಲ್ಲಿ ಆಹಾರ ಪದಾರ್ಥಗಳನ್ನುಒಂದು ದಿವಸ ತಂದು ಮಾರಾಟ ಮಾಡಿ ಮರುದಿನ ಬಂದವರಿಗೆ ಆಗಿಹೋಯಿತು ಎಂದು ಹೇಳುತ್ತಾರೆ. ಅಂಥವರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರಿ ಇದರಿಂದ ಬಡವರಿಗೆ ಬಹಳ ಅನ್ಯಾಯವಾಗುತ್ತಿದೆ. ಇದರ ಬಗ್ಗೆ ಸರ್ಕಾರ ಗಮನ ಕೊಡುತ್ತದೆಯೇ?

ಶ್ರೀಮತಿ ಮನೋರಮ ಮಧ್ವರಾಜ್ : ತಪ್ಪಿತಸ್ಥ ಅಧಿಕಾರಿಗಳ ಮತ್ತು ಸೊಸೈಟಿಗಳ ಮೇಲೆ ಕ್ರಮ ತೆಗೆದುಕೊಂಡು ಮುಂದೆ ಜನರಿಗೆ ಆಹಾರ ಪದಾರ್ಥಗಳು ಸರಿಯಾಗಿ ವಿತರಣೆ ಆಗುವ ರೀತಿಯಲ್ಲಿ ನೋಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಉಪಾಧ್ಯಕ್ಷಣೆಯವರು : ಈಗ ತಡೆಹಿಡಿಯಲಾದ ಪ್ರಶ್ನೆಗಳು.